ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

ದಿನಾಂಕಃ 31-07-2017

ಪಾಟೀಸವಾಲುಃ- ಶ್ರೀ ಜೆಡಿಬಿ ವಕೀಲರಿಂದ ವಾದಿ ಪರವಾಗಿ,

ನಾನು 1ನೇ ಪ್ರತಿವಾದಿ ಪರವಾಗಿ ಸಾಕ್ಷಿ ಹೇಳಲು ಬಂದಿರುತ್ತೇನೆ. 1ನೇ ಪ್ರತಿವಾದಿ ಬಾವಾ ಅಮೀರ್ ಬಿಟ್ಟು ಬೇರೆ ಯಾರು ಪ್ರತಿವಾದಿಗಳಿರುತ್ತಾರೆ ಮತ್ತು ಅವರ ಬಗ್ಗೆ ಮಾಹಿತಿ ಇರುವುದಿಲ್ಲ. ಜಾಲಿ ಗ್ರಾಮದ ಸರ್ವೆ ನಂ. 262 ಕ್ಷೇತ್ರ 4-1-0 ಸಂಬಂಧಪಟ್ಟಂತೆ ಈ ದಾವೆ ಮಾಡಿರುತ್ತಾರೆ. ನಾನು ಸರ್ವೆ ನಂಬರ್ ಮತ್ತು ವಿಸ್ತೀರ್ಣವನ್ನು ಸ್ವತಹ ಜಾಗವನ್ನು ನೋಡಿ ಮತ್ತು ಆರ್‌ಟಿಸಿಯನ್ನು ನೋಡಿ ವಿಸ್ತೀರ್ಣವನ್ನು ಹೇಳಿರುತ್ತೇನೆ. ನನಗೆ ದಾವಾ ಸ್ವತ್ತಿನ ಆರ್‌ಟಿಸಿಯನ್ನು ಅದರ ಮಾಲಿಕರಾದ ಫಕ್ಕಿ ರವರು 2-3 ವರ್ಷದ ಹಿಂದೆ ಕೊಟ್ಟಿರುತ್ತಾರೆ. ಸದ್ರಿ ಫಕ್ಕಿರವರು ಜಾಗವನ್ನು ಮಾರಾಟ ಮಾಡುವ ಸಂಬಂಧ ಆರ್‌ಟಿಸಿಯನ್ನು ನನಗೆ ಕೊಟ್ಟಿರುತ್ತಾರೆ. ಬಾವಾ ಅಮೀರ್ ಮತ್ತು ಫಕ್ಕಿ ಇಸ್ಮಾಯಿಲ್ ರವರ ನಡುವೆ ಆದ ವ್ಯವಹಾರವನ್ನು ನಾನು ಮಾಡಿಕೊಟ್ಟಿರುವುದಿಲ್ಲ. ನಾನು ಸೇಲ್ ಮಾಡಿದ ದಸ್ತಾವೇಜಿಗೆ ಸಹಿ ಮಾಡಿರುತ್ತೇನೆ. ನಾನು ಸೇಲ್ ಮಾಡಿದ ದಸ್ತವೇಜನ್ನು ಓದಿ ನೋಡಿರುವುದಿಲ್ಲ. ನಾನು



ದಸ್ತವೇಜನ್ನು ಓದಿ ನೋಡದೇ ಇರುವ ಕಾರಣ ಅದು ಯಾವ ದಸ್ತವೇಜು ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಹೇಳಿರುತ್ತಾರೆ. ನಾನು ಕ್ರಯ ದಸ್ತವೇಜಿಗೆ ಸಹಿ ಮಾಡಿರುತ್ತೇನೆ. ಆ ದಸ್ತವೇಜು ಆದಂತಹ ತಾರೀಖು ನನಗೆ ಗೊತ್ತಿರುವುದಿಲ್ಲ. ನನಗೆ ಮುಂಡಳ್ಳಿ ಗ್ರಾಮದ ಸರ್ವೆ ನಂ. 161 ರಲ್ಲಿ 0-5-0 ಗುಂಟೆ ಜಮೀನು ಇರುತ್ತದೆ. ದಾವಾ ಸ್ವತ್ತಿನ ಪೂರ್ವಕ್ಕೆ ಒಂದು ಜಾಗವಿದ್ದು ಅದು ಯಾರದು ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ಉತ್ತರಕ್ಕೆ ಶಾಲೆ ಇರುತ್ತದೆ. ದಕ್ಷಿಣಕ್ಕೆ ಕಾಲಿ ಜಾಗವಿದ್ದು ಅದರ ಮಾಲಿಕರ ಹೆಸರು ನನಗೆ ಗೊತ್ತಿರುವುದಿಲ್ಲ. ಉತ್ತರಕ್ಕೆ ಶಾಲೆ ಇರುತ್ತದೆ. ಪಶ್ಚಿಮಕ್ಕೆ ಅರಣ್ಯ ಇಲಾಖೆಯ ಭೂಮಿ ಇರುತ್ತದೆ. ದಾವಾ ಸ್ವತ್ತನ್ನು ನನಗೆ ಫಕ್ಕಿ ಇಸ್ಮಾಯಿಲ್ ರವರು ಸುಮಾರು 2 ವರ್ಷದ ಹಿಂದೆ ತೋರಿಸಿರುತ್ತಾರೆ. ನಾನು ದಾವಾ ಸ್ವತ್ತಿನ ಬಳಿಗೆ 2-3 ಬಾರಿ ಹೋಗಿರುತ್ತೇನೆ. ನಾನು ದಾವಾ ಸ್ವತ್ತಿನ ಬಳಿ ಇರುವ ನಮ್ಮ ಸಂಬಂಧಿಕರ ಮನೆಗೆ ಹೋದ ಸಂದರ್ಭದಲ್ಲಿ ನೋಡಿರುತ್ತೇನೆ. ನಮ್ಮ ಊರು ದಾವಾ ಸ್ವತ್ತಿನಿಂದ 3 ರಿಂದ 4 ಕಿ.ಮಿ. ದೂರವಾಗಿರುತ್ತದೆ. ನಾನು ಸಹಿ ಮಾಡಿದ ದಾಖಲೆಯನ್ನು ಫಕ್ಕಿ ಇಸ್ಮಾಯಿಲ್ ರವರು ಬಾವಾ ಅಮೀರ್ ರವರಿಗೆ ಬರೆದುಕೊಟ್ಟಿರುತ್ತಾರೆ. ನಾನು ಸಹಿ ಮವಾಡಿದ ದಸ್ತವೇಜಿಗೆ ಎಷ್ಟು ಜನ ಪಕ್ಷಗಾರರು ಇದ್ದರೆಂದು ನನಗೆ ಗೊತ್ತಿರುವುದಿಲ್ಲ. ನಾನು ದಸ್ತವೇಜಿಗೆ ಸಹಿ ಮಾಡಿದ ಸಮಯದಲ್ಲಿ ಉಪನೋಂದಣಿ ಕಚೇರಿಗೆ ಫಕ್ಕಿ ಇಸ್ಮಾಯಿಲ್ ರವರ ತಾಯಿ ಅಲ್ಲಿಗೆ ಬಂದಿರುವುದಿಲ್ಲ. ನಾನು ಫಕ್ಕಿ ಇಸ್ಮಾಯಿಲ್ ರವರ ತಾಯಿಯನ್ನು ಎಂದೂ ನೋಡಿರುವುದಿಲ್ಲ. ಫಕ್ಕಿ ಇಸ್ಮಾಯಿಲ್ ರವರಿಗೆ ಅವರ ತಾಯಿ ಮತ್ತು ತಮ್ಮಂದಿರು

ಬರೆದುಕೊಟ್ಟಿರುತ್ತಾರೆ ಎನ್ನುವ ಜಿಪಿಎಯನ್ನೂ ಸಹ ನಾನು ನೋಡಿರುವುದಿಲ್ಲ. ಜಿಪಿಎ ದಾಖಲೆಯನ್ನು ನಾನು ನೋಡದೇ ಇರುವುದರಿಂದ ಅದು ನ್ಯಾಯಯುತವಾದ ದಾಖಲೆಯೋ ಅಥವಾ ಸೃಷ್ಟಿ ಮಾಡಿದ ದಾಖಲೆಯೋ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಹೇಳಿರುತ್ತಾರೆ. ದಾವಾ ಸ್ವತ್ತಿನ ಮೂಲ ಮಾಲಿಕರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಫಕ್ಕಿ ಇಸ್ಮಾಯಿಲ್ ರವರು ದಾವಾ ಸ್ವತ್ತನ್ನು ತಮ್ಮ ಹೆಸರಿಗೆ ಹೇಗೆ ವರ್ಗಾವಣೆ ಮಾಡಿಸಿಕೊಂಡರು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಎದುರುಗಡೆ ಉಪನೋಂದಣಿ ಕಚೇರಿಯಲ್ಲಿ ಬಾವಾ ಅಮೀರ್ ರವರು ಫಕ್ಕಿ ಇಸ್ಮಾಯಿಲ್ ರವರಿಗೆ ರೂ. 7,52,000-00 ಹಣವನ್ನು ನಗದು ರೂಪದಲ್ಲಿ ಮತ್ತು 10 ಲಕ್ಷ ರೂಪಾಯಿಯ ಚೆಕ್‌ನ್ನು ಕೊಟ್ಟಿರುತ್ತಾರೆ. ಸದ್ರಿ ಚೆಕ್ಕು ಯಾವ ಬ್ಯಾಂಕಿನದು ಎಂದು ನನಗೆ ಗೊತ್ತಿರುವುದಿಲ್ಲ. ಆ ದಿವಸ 10 ಲಕ್ಷದ್ದು ಒಂದೇ ಚೆಕ್ಕನ್ನು ಕೊಟ್ಟಿರುತ್ತಾರೆ. ಬಾವಾ ಅಮೀರ್ ರವರು ನನ್ನ ಅಂಗಡಿಗೆ ಬರುತ್ತಿದ್ದರಿಂದ ಅವರು ಪರಿಚಯವಿರುತ್ತಾರೆ. ಫಕ್ಕಿ ಇಸ್ಮಾಯಿಲ್ ರವರು ದಸ್ತಾವೇಜಿಗೆ ಸಹಿ ಮಾಡಲು ನನ್ನನ್ನು ಕರೆದಿರುತ್ತಾರೆ. ಫಕ್ಕಿ ಇಸ್ಮಾಯಿಲ್ ರವರೂ ಸಹ ನಮ್ಮ ಅಂಗಡಿಗೆ ಬಂದು ಹೋಗುತ್ತಿದ್ದರು. ಮೇಲೆ ಹೇಳಿದ ಇಬ್ಬರೂ ಸಹ ಆಗಾಗ ನನ್ನ ಅಂಗಡಿಗೆ ಬಂದು ಮಾತನಾಡಿಸಿಕೊಂಡು ಹೋಗುತ್ತಿದ್ದರು. ನಾನು ಮೇಲೆ ಹೇಳಿದ ಇಬ್ಬರ ಜೊತೆಯಲ್ಲಿ ಅಷ್ಟೊಂದು ಆತ್ಮೀಯವಾಗಿ ಇರುವುದಿಲ್ಲ,



ಆದರೆ ಅವರು ನಮ್ಮ ಅಂಗಡಿಗೆ ಬಂದು ಹೋಗುತ್ತಿದ್ದರು. ನಾನು ಮತ್ತು ಬಾವಾ ಅಮೀರ್ ಹಾಗೂ ಫಕ್ಕಿ ಇಸ್ಮಾಯಿಲ್ ರವರು ಸೇರಿಕೊಂಡು ವಾದಿಯರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಿಪಿ-17 ಕ್ರಯಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1 ಕ್ರಯಪತ್ರ ಸೃಷ್ಟಿತ ದಾಖಲೆ ಎಂದರೆ ಸರಿಯಲ್ಲ. ನಿಪಿ-17 ರಂತೆ ಬಾವಾ ಅಮೀರ್ ರವರು ಯಾವುದೇ ಹಕ್ಕನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬಗ್ಗೆ ನನಗೆ ಯಾವುದೇ ವಸ್ತುಸ್ಥಿತಿ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಫಕ್ಕಿ ಇಸ್ಮಾಯಿಲ್ ರವರಿಗೆ ಪಾವತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ದಾವಾ ಆಸ್ತಿಗಳಿಗೆ ಕ್ರಯದಸ್ತವೇಜು ಆಗುವ ಪೂರ್ವದಲ್ಲಿ ಹೋಗಿರುತ್ತೇನೆ. ದಾವಾ ಆಸ್ತಿಯನ್ನು ನೋಡಿದ ಸಮಯದಲ್ಲಿ ಅಲ್ಲಿ ಫಲ ಬರುವಂತಹ ತೆಂಗಿನ ಮರ, ಗೇರು ಗಿಡಗಳು ಮತ್ತು ಅಕೇಶಿಯಾ ಗಿಡಗಳು ಇದ್ದವು. ದಾವಾ ಸ್ವತ್ತಿಗೆ ಹಳೆಯ ಕಲ್ಲಿನ ಕಂಪೌಂಡ್ ಇತ್ತು. ದಾವಾ ಸ್ವತ್ತಿನ ಒಳಗಡೆ ಯಾವುದೇ ಕಟ್ಟಡ ಇರಲಿಲ್ಲ. ಬಾವಿ ಇತ್ತು. ನಾನು ನೋಡಿದ ಸಮಯದಲ್ಲಿ ದಾವಾ ಸ್ವತ್ತಿನಲ್ಲಿದ್ದಂತಹ ಮರಗಿಡಗಳು, ಬಾವಿ ಮತ್ತು ಕಂಪೌಂಡ್ ತುಂಬಾ ಹಳೆಯದ್ದು ಆಗಿರುತ್ತದೆ. ದಾವಾ ಸ್ವತ್ತಿನ ಕಂಪೌಂಡ್‌ಗೆ ತುಂಡಾದ ಗೇಟ್ ಇತ್ತು. ಮೇಲೆ ಹೇಳಿದ ಎಲ್ಲಾ ಮರಗಿಡಗಳನ್ನು ನೆಟ್ಟಿದ್ದು, ಬಾವಿ ತೋಡಿಸಿದ್ದು ಮತ್ತು ಕಂಪೌಂಡ್ ಹಾಕಿಸಿದ್ದನ್ನು ವಾದಿಯರು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಎಂದೂ ಬಾವಾ ಅಮೀರ್ ರಾಗಲೀ, ಫಕ್ಕಿ ಇಸ್ಮಾಯಿಲ್ ರಾಗಲೀ ಎಂದೂ ಸ್ವಾದೀನ ಇರಲಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಿಂದ ಸುಮಾರು 50 ಅಡಿ ದೂರದಲ್ಲಿ ಒಂದು ಅಂಗಡಿ ಇರುತ್ತದೆ. ಸದ್ರಿ ಅಂಗಡಿ ಮಾಸ್ತಪ್ಪ ಕೋವಿ ನಾಯ್ಕ ರವರಿಗೆ ಸೇರಿರುತ್ತದೆ ಮತ್ತು ಅವರು ನಡೆಸಿಕೊಂಡು ಬರುತ್ತಾರೆ ಎಂದರೆ ಸರಿ. ನಾನು 1 ಮತ್ತು 2ನೇ ಪ್ರತಿವಾದಿಯರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-17 ಕ್ರಯಪತ್ರವಾದ ಸಮಯದಲ್ಲಿ ಉಪನೋಂದಣಿ ಕಚೇರಿಯಲ್ಲಿ ನಾನು, ಬಾವಾ ಅಮೀರ್ ಮತ್ತು ಫಕ್ಕಿ ಇಸ್ಮಾಯಿಲ್ ರವರು ಮಾತ್ರ ಇದ್ದೆವು, ಬೇರೆ ಯಾರೂ ಇರಲಿಲ್ಲ. ನಿಪಿ-17 ಕ್ರಯ ಪತ್ರ ನನ್ನ ಸಮಕ್ಷಮ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆ. ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಭಟ್ಕಳ